**ಸುಬ್ಬಿ:** ರೀ... ಈ ವೀಕ್‌ಎಂಡ್ ಅಲ್ಲಿ ಬೆಂಗಳೂರಿಗೆ ಹೋಗೋಣ್ವಾ?

**ಗುಂಡ:** ಆಯ್ತು, ಹೋಗೋಣ.

**ಸುಬ್ಬಿ:** ಹಾಗೇ ಕಮರ್ಷಿಯಲ್ ಸ್ಟ್ರೀಟ್‌ಗೆ ಹೋಗಿ, ಡ್ರೆಸ್ ತಗೊಳ್ಳೋಣ!

**ಗುಂಡ:** ಆಯ್ತು ಕಣೇ!

**ಸುಬ್ಬಿ:** ಆಮೇಲೆ ಒರಾಯನ್ ಮಾಲ್ ಹೋಟೆಲ್‌ನಲ್ಲಿ ನಾರ್ತ್ ಸ್ಪೆಷಲ್ ಥಾಲಿ ಊಟ ಮಾಡೋಣ!

**ಗುಂಡ:** ಅಯ್ಯೋ ಅದಕ್ಕೇನಂತೆ, ಹಾಗೇ ಮುಂದಿನ ಸೋಮವಾರದಿಂದ ದಿನಪೂರ್ತಿ ಮೆಜೆಸ್ಟಿಕ್ ಬಳಿ ಇರುವ ಅಣ್ಣಮ್ಮ ದೇವಸ್ಥಾನಕ್ಕೆ ಹೋಗಿ ಬಿಡೋಣ!

**ಸುಬ್ಬಿ:** ದೇವಸ್ಥಾನಕ್ಕಾ... ಯಾಕ್ರೀ?

**ಗುಂಡ:** ಇಷ್ಟೆಲ್ಲ ಸುತ್ತಾಡಿದ ಮೇಲೆ ಜೇಬು ಖಾಲಿ ಆಗಿರುತ್ತಲ್ಲಾ, ಅದಕ್ಕೆ ದೇವಸ್ಥಾನದ ಮುಂದೆ ಕುಳಿತು ಭಿಕ್ಷೆ ಬೇಡುವುದಕ್ಕೆ!

***

**ಸುಬ್ಬಿ:** ನಮ್ಮ ಮಗು ಹೊಸ್ತಿಲು ದಾಟಿ, ಎಲ್ಲೋ ಹೋಗಿದೆ. ಬೇಗ ಪೊಲೀಸರಿಗೆ ಫೋನ್ ಮಾಡಿ!

**ಗುಂಡ:** ಪೊಲೀಸರಿಗೆ ಫೋನ್ ಮಾಡೋದು ಬೇಡ. ಚಾಮರಾಜಪೇಟೆಗೋ, ಇಲ್ಲಾ ಗಾಂಧಿ ಬಜಾರ್ ಕಡೆಗೋ ಹೋಗಿರ್ತಾಳೆ ನೋಡು.

**ಸುಬ್ಬಿ:** ಅದ್ಹೇಗೆ ಹೇಳ್ತೀರಿ?

**ಗುಂಡ:** ಅದಾ... ಮಗು ನಿನ್ನ ಹೊಟ್ಟೆಯಲ್ಲಿದ್ದಾಗ, ನೀನು ತಿನ್ನೋಕಂತಲೇ ವಾರವಿಡೀ ಹೋಗ್ತಾ ಇದ್ದದ್ದು ಅವೆರಡೇ ಜಾಗಕ್ಕಲ್ವಾ. ಮಗುಗೂ ನಿನ್ನ ಬುದ್ಧಿ ಬಂದಿದೆ, ಅಷ್ಟೆ.

***

(ಗುಂಡನಿಗೆ ಕೊರೊನಾ ಟೈಮ್‌ನಲ್ಲಿ ಡಾಕ್ಟರ್ ಮೇಲೆ ನಂಬಿಕೆ ಹೊರಟು ಹೋಗಿತ್ತು)

**ಸುಬ್ಬಿ:** ಏನಯ್ಯಾ ಡಾಕ್ಟರ್‌ಗಳನ್ನು ಈ ಪಾಟಿ ಬೈಯ್ತಾ ಇದೀಯಾ? ಸರಿಯಾಗಿ ಚಿಕಿತ್ಸೆ ಕೊಡಲಿಲ್ವಾ?

**ಗುಂಡ:** ಇಲ್ಲ ಕಣಪ್ಪ. ಮೊದಲು ಅಲೋಪತಿ, ಆಮೇಲೆ ಹೋಮಿಯೋಪತಿ, ನಂತರ ನ್ಯಾಚುರೋಪತಿ ಅಂದ್ರು. ಅವ್ರತ್ರೆಲ್ಲ ಸುತ್ತಾಡಿ ಸುತ್ತಾಡಿ ಸಾಕಾಗಿದೆ. ಎಲ್ಲೂ ಸರಿಯಾದ ಚಿಕಿತ್ಸೆ ಸಿಗಲಿಲ್ಲ.

**ಸುಬ್ಬ:** ಸರಿ ಒಮ್ಮೆ ತಿರುಪತಿಗೆ ಹೋಗಿ ನೋಡು!

***

**ಗುಂಡ:** ಎರಡು ಬಿಸಿ ಬಿಸಿ ಕಾಫಿ ಕೊಡಪ್ಪ.

**ಸುಬ್ಬಿ:** (ಕಾಫಿ ಬಂದ ಮೇಲೆ) ರೀ... ಕಾಫಿ ತುಂಬಾ ಬಿಸಿ ಇದೆ.

**ಗುಂಡ:** ಬೇಗ ಬೇಗ ಕುಡಿದು ಬಿಡು. ಇಲ್ಲಂದ್ರೆ ತಣ್ಣಗಾಗುತ್ತೆ.

**ಸುಬ್ಬಿ:** ಅಯ್ಯೋ ರಾಮಾ... ಇಷ್ಟು ಬಿಸಿ ಕಾಫಿ ಹೇಗೇ ಕುಡಿಯೋದು?

**ಗುಂಡ:** ಹೇ... ಅಲ್ಲಿರುವ ಬೋರ್ಡ್ ನೋಡು. ಬಿಸಿ ಕಾಫಿಗೆ ಇಪ್ಪತ್ತು ರೂಪಾಯಿ ಮತ್ತು ಕೋಲ್ಡ್ ಕಾಫಿಗೆ ಐವತ್ ರೂಪಾಯಿ ಅಂತೆ!

***




ಒಂದು ಗಂಟೆ ಹೆಚ್ಚು ಕೆಲಸ ಮಾಡಿ ಸರ್ಕಾರಿ ನೌಕರರಿಗೆ ಸಿ.ಎಂ. ಕರೆ



ಒಂದೇಕೆ ಎರಡು ಗಂಟೆ ಜಾಸ್ತಿ ಕೆಲಸ ಮಾಡ್ತಿ... ಇನ್ನೂ ಹೆಚ್ಚು ಲಂಚ ಲೂಟಿ ಮಾಡಬಹುದು

**ಗುಂಡ:** ಇಲ್ಲಿ ನೋಡಿ ಡಾಕ್ಟ್ರೆ... ನನ್ನ ಎರಡು ಕಿವಿಗಳೂ ಸುಟ್ಟು ಗಾಯಗೊಂಡಿವೆ.

**ಡಾಕ್ಟರ್:** ಅರೇ... ಯಾಕಯ್ಯಾ ಹೀಗ್ ಮಾಡ್ಕೊಂಡೆ?

**ಗುಂಡ:** ಮನೇಲಿ ಇಸ್ತ್ರಿ ಮಾಡ್ಕೋತಾ ಇದ್ದೆ ಆಗ ಫೋನ್ ಬಂತು, ಫೋನ್ ಬದಲು ಐರನ್ ಬಾಕ್ಸ್ ಕಿವಿಗೆ ಇಟ್ ಕೊಂಡ್ ಬಿಟ್ಟೆ ಡಾಕ್ಟ್ರೆ!

**ಡಾಕ್ಟರ್:** ಅಯ್ಯೋ ಪಾಪ ಒಂದ್ ಕಿವಿಯೇನೋ ಸುಟ್ಟುಕೊಂಡೆ ಆದ್ರೆ ಇನ್ನೊಂದು ಕಿವಿಗೆ ಏನಾಯಿತು?

**ಗುಂಡ:** ನನ್ನ ಗ್ರಹಚಾರಕ್ಕೆ ಮತ್ತೆ ಫೋನ್ ಬಂತು!

***

**ಜಡ್ಜ್:** ನಿನ್ ಹೆಂಡ್ತಿಗೆ ಕಾಫಿಯಲ್ಲಿ ವಿಷ ಬೆರೆಸಿ ಕೊಲೆ ಮಾಡುವಾಗ ನಿನಗೆ ಏನೂ ಅನ್ನಿಸಲೇ ಇಲ್ವಾ?

**ಗುಂಡ:** ಅನ್ನಿಸ್ದೆ ಇರುತ್ತಾ ಸಾಹೇಬ್ರೆ. ಒಂದು ಕಪ್ ಕಾಫಿ ಕುಡಿದ ಮೇಲೆ ಅವಳು, 'ರೀ... ಕಾಫಿ ತುಂಬಾ ಚೆನ್ನಾಗಿ ಮಾಡಿದ್ದೀರಿ. ಇನ್ನೊಂದು ಕಪ್ ಕೊಡ್ರಿ' ಅಂದ್ಳು. ಬೇಜಾರ್ ಮಾಡ್ಕೊಂಡೆ ಇನ್ನೊಂದ್ ಕಪ್ ಕೊಟ್ಟೆ.

***

**ಟೀಚರ್:** ಯಾಕೋ, ಒಂದು ವಾರದಿಂದ ಶಾಲೆಗೆ ಬಂದಿಲ್ಲ?

**ಮರಿ ಗುಂಡ:** ಹೋದ ಜಾಗಕ್ಕೇ ಪದೇ ಪದೇ ಹೋದ್ರೆ ಮರ್ಯಾದೆ ಸಿಕ್ಕಲ್ಲ ಅಂತ ಅಮ್ಮ ಹೇಳ್ತಿದ್ರು ಮಿಸ್, ಅದ್ಕೆ ಬಂದಿಲ್ಲ.

***

**ಮರಿ ಗುಂಡ:** ರೀ... ಈ ಪುಸ್ತಕ ಬೇಡವಂತೆ. ಇದರ ತುಂಬೆಲ್ಲ ಹೆಸರು ಮತ್ತು ಅವರ ವಿಳಾಸವೇ ಇದಾವಂತೆ!

**ಲೈಬ್ರೇರಿಯನ್:** (ಪುಸ್ತಕವನ್ನ ನೋಡಿ) ಲೇಯ್... ಇನ್ನೊಂದ್ ಸಲಾ ನನ್ನ ಟೇಬಲ್ ಮೇಲೆ ಇರುವ ಆಫೀಸ್ ಅಟೆಂಡೆನ್ಸ್ ರಿಜಿಸ್ಟರ್ ಪುಸ್ತಕವನ್ನ ಕಥೆ ಪುಸ್ತಕ ಅಂತ ಅಂದ್ಕೊಂಡು ತಗೊಂಡ್ ಹೋದ್ರೆ ನಿನ್ನ ಕಾಲು ಮುರಿತೀನಿ.

***

**ತಿಮ್ಮಿ:** ಏನೇ ಇದೂ? ನಿನ್ನ ಕೆನ್ನೆ ಈ ಪಾಟಿ ಊದಿಕೊಂಡಿದೆ?

**ಸುಬ್ಬಿ:** ನಿನ್ನೆ ಮಧ್ಯ ರಾತ್ರಿ ನನ್ ಗಂಡ ಕೆನ್ನೆಗೆ ಬಾರಿಸ್ದ. ಅದ್ಕೆ ಊದಿಕೊಂಡಿದೆ.

**ತಿಮ್ಮಿ:** ಅಲ್ವೇ... ನಿನ್ನ ಗಂಡ 3 ದಿನ ಟ್ರಿಪ್ ಹೋಗ್ತಿದಾರೆ ಅಂತ ಹೇಳಿದ್ದೆ ಅಲ್ವಾ?

**ಸುಬ್ಬಿ:** ನಾನೂ ಹಾಗೇ ಅಂದುಕೊಂಡು ಸಿನಿಮಾ ನೋಡೋಕೆ ನೈಟ್ ಶೋಗೆ ಹೋಗಿದ್ದೆ!

***

**ಸುಬ್ಬ:** ನಿನ್ನ ಜೀವನಕ್ಕೆ ದಾರಿ ತೋರಿಸಿದ ಬುಕ್ ಯಾವುದು?

**ಗುಂಡ:** ನಮ್ ಅಪ್ಪನ ಚೆಕ್ ಬುಕ್!

***

**ಗುಂಡ:** ನನ್ನ ಹೆಂಡ್ತಿ ಸುಬ್ಬಿನಾ, ನಿನ್ನೆ ರಾತ್ರಿ ಯಾರೋ ಕಿಡ್ನ್ಯಾಪ್ ಮಾಡಿದ್ದಾರೆ ಸರ್.

**ಬ್ರೋಕರ್:** ಇದು ಪೊಲೀಸ್ ಠಾಣೆ ಅಲ್ಲ. ಮದುವೆ ಬ್ರೋಕರ್ ಆಫೀಸ್. ಪೊಲೀಸ್ ಠಾಣೆಗೆ ಹೋಗಿ ದೂರು ಕೊಡು.

**ಗುಂಡ:** ದೂರು ಕೊಟ್ರೆ ಪೊಲೀಸರು ಅವ್ಳನ್ನು ಹುಡುಕಿ ಮನೆಗೆ ಕರೆದುಕೊಂಡು ಬರುತ್ತಾರೆ. ಅದ್ಕೆ ಅಲ್ಲಿಗೆ ಹೋಗದೆ ಇಲ್ಲಿಗೆ ಬಂದೆ. ದಯವಿಟ್ಟು ಒಂದೊಳ್ಳೆ ಹುಡುಗಿನ ತೋರ್ಸಿ ಮದುವೆ ಆಗೋಕೆ.

***

**ಗುಂಡ:** ಈ ಬಿನ್ನಿಪೇಟೆ ಸರ್ಕಲ್‌ನಲ್ಲಿ ವಿದ್ಯುತ್ ದೀಪ ಅಳವಡಿಸಲು ಎಷ್ಟು ಜನ ಬೇಕಾಗುತ್ತೆ ಹೇಳ್ರಿ?

**ಬೆಸ್ಕಾಂ ಸಿಬ್ಬಂದಿ:** ನಿಜ ಹೇಳ್ಲಾ ಸರ್. ಒಟ್ಟು ಹನ್ನೊಂದು ಮಂದಿ ಬೇಕು. ಟ್ಯೂಬ್‌ಲೈಟ್ ಎಲ್ಲಿ ಸಿಗುತ್ತೆ ಅಂತ ಡಿಸೈಡ್ ಮಾಡಲು ಪರ್ಚೇಸಿಂಗ್ ಕಮಿಟಿಗೆ ಮೂವರು, ಟ್ಯೂಬ್‌ಲೈಟ್ ಬರ್ನ್ ಆಗಿದೆಯಾ ಇಲ್ವಾ ಅಂತ ಪರಿಶೀಲನೆ ಮಾಡುವ ಇನ್ಸ್‌ಪೆಕ್ಷನ್ ಕಮಿಟಿಗೆ ನಾಲ್ವರು, ಏಣಿಯನ್ನು ಹೊತ್ತು ತರೋಕೆ ಇಬ್ರು, ಕಂಬ ಹತ್ತೋಕೆ ಒಬ್ಬ, ಅದರ ರಿಪೋರ್ಟ್ ಬರೆಯೋಕೆ ಇನ್ನೊಬ್ಬ!

—ಆರ್. ವೀರೇಶ್ ಕುಮಾರ್,
ಬೆಂಗಳೂರು